ಓ ಎಸ್ **209/2016**

ಡಿ ಡಬ್ಲ್ಯೂ **-3**

**ದಿಃ 14.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎನ್ ಆರ್ ವಕೀಲರಿಂದ:

ನಾನು 4 ನೆ ತರಗತಿಯವರೆಗೂ ಓದಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುತ್ತದೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಕ್ಕೆ ನಮ್ಮ ವಕೀಲರ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ . ನಾನು ನ್ಯಾಯಾಲಯಕ್ಕೆ ಸ.ನಂ. 40/1 ಮತ್ತು 40/2 ಎ ಸ್ವತ್ತಿಗೆ ಸಂಬಂದಿಸಿದಂತೆ ನ್ಯಾಯಾಲಯಕ್ಕೆ ಬಂದಿರುತ್ತೇನೆ. ಸ.ನಂ.40/1 ರಲ್ಲಿ 2 ಎಕರೆ ಚಿಲ್ಲರೆ ಜಮೀನು ಇರುತ್ತದೆ. ನನಗೆ ಸದರಿ ಜಮೀನು ನಿಖರವಾಗಿ ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನೆನಪಿಲ್ಲ. ಸ.ನಂ. 40/2 ಎ ಜಮೀನಿನಲ್ಲಿ 1 ಎಕರೆ 38 ಗುಂಟೆ ಇರಬಹುದು , ನನಗೆ ನಿಖರವಾಗಿ ನೆನಪಿಲ್ಲ.

ಸ.ನಂ. 40/1 ಮತ್ತು 40/2 ಎ ನೇದ್ದರ ಚೆಕ್ ಬಂದಿ ಗೊತ್ತಿದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ಆದರೆ ಅಕ್ಕ ಪಕ್ಕ ಯಾರು ಇರುತ್ತಾರೆ ಎಂದು ನನಗೆ ಗೊತ್ತಿರುತ್ತದೆ. ಸ.ನಂ. 40/1 ಮತ್ತು 40/2 ಎ ನನ್ನ ಹೆಸರಿನಲ್ಲಿರುತ್ತದೆ. ನಾನು ಸ.ನಂ. 40/1 ಮತ್ತು 40/2 ಎ ಸ್ವತ್ತುಗಳನ್ನು ನನ್ನ ಪಕ್ಕದ ಮನೆಯವರಾದ ಭಾನುಮತಿ ಮತ್ತು ರೇವಮ್ಮ ನವರ ಹತ್ತಿರ ಖರೀದಿ ಮಾಡಿರುತ್ತೇನೆ. ಸ.ನಂ. 40/1 ಮತ್ತು 40/2 ಎ ಎರಡು ಸ್ವತ್ತುಗಳನ್ನು ನಾನು ಎಷ್ಟು ಪತ್ರಗಳಲ್ಲಿ ಪಡೆದಿರುತ್ತೇನೆ ಎಂದು ನನಗೆ ನೆನಪಿಲ್ಲ , ಪತ್ರ ವ್ಯವಹಾರವನ್ನು ನನ್ನ ಯಜಮಾನರು ಮಾಡಿರುತ್ತಾರೆ.

ಸದರಿ ಜಮೀನಿನ ಪತ್ರಗಳನ್ನು ನನ್ನ ಅಣ್ಣ ತಮ್ಮಂದಿರ ಹತ್ತಿರ ಕೇಳಿ ನಂತರ ಜಮೀನನ್ನು ಖರೀದಿ ಮಾಡಿರುತ್ತೇನೆ. ಸದರಿ ಭಾನುಮತಿ ಮತ್ತು ರೇವಮ್ಮ ನವರು ಸ.ನಂ. 40/1 ಮತ್ತು 40/2 ಎ ನೇದ್ದನ್ನು ನಾಗರಾಜು ರವರ ಹತ್ತಿರ ಖರೀದಿ ಮಾಡಿರುತ್ತಾರೆ. ಭಾನುಮತಿ ರವರಿಗೆ ನಾಗರಾಜು ರವರ ಕಡೆಯಿಂದ ಬಂದಿರುವ ಪತ್ರವನ್ನು ನಾನು ಅವರಿಂದ ಪಡೆದುಕೊಂಡಿರುತ್ತೇನೆ , ಅದನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಭಾನುಮತಿ ಮತ್ತು ನಾಗರಾಜು ರವರ ಹತ್ತಿರ ಪಡೆದಿರುವ ಪತ್ರವನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ ಎಂದರೆ ನಾನು ಅದನ್ನು ನ್ಯಾಯಾಲಯಕ್ಕೆ ಕೊಡುತ್ತೇನೆ ಎಂದು ನುಡಿಯುತ್ತಾರೆ. ನಾಗರಾಜು ರವರಿಂದ ಭಾನುಮತಿ ಮತ್ತು ರೇವಮ್ಮ ರವರು ಯಾವ ರೂಪದಲ್ಲಿ ಸದರಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾಗರಾಜು ರವರಿಗೆ ದಾವಾ

ಸ್ವತ್ತು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನಾಗರಾಜು ರವರು ಯಾರಿಂದ ಸದರಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲದೇ ಇರುವ ಕಾರಣ ನಾನು ನಮ್ಮ ವಕೀಲರಿಗೆ ತಿಳಿಸಿರುವುದಿಲ್ಲ. ನಾಗರಾಜು ರವರು ಸದರಿ ಸ್ವತ್ತನ್ನು ಖರೀದಿ ಮಾಡುವ ಮುಂಚೆ ಆ ಸ್ವತ್ತಿಗೆ ಯಾರು ಯಾರು ಮಾಲೀಕರಿದ್ದರು ಎಂದು ನನಗೆ ಗೊತ್ತಿಲ್ಲ.

ನಾಗರಾಜು ರವರಿಗೆ ಬಂದಂತಹ ಮೂಲಪತ್ರ ಮತ್ತು ಭಾನುಮತಿ ರವರಿಗೆ ಬಂದಂತಹ ಮೂಲ ಪತ್ರ ಯಾರ ಹತ್ತಿರ ಇರುತ್ತದೆ ಎಂದರೆ ಸಾಕ್ಷಿ ಅವುಗಳ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಆ ಪತ್ರಗಳನ್ನು ನ್ಯಾಯಾಲಯ ಕ್ಕೆ ತಲುಪಿಸುತ್ತೇನೆ ಎಂದು ನುಡಿಯುತ್ತಾರೆ. ಯಾವ ಮೂಲಪತ್ರಗಳು ನನ್ನ ಹತ್ತಿರ ಇರುವುದಿಲ್ಲ, ನಾನು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸುಳ್ಳು. ದಾವಾ ಸ್ವತ್ತಿನ ಮೂಲ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ಬೈರಯ್ಯ ಎನ್ನುವವರು ದಾವಾ ಸ್ವತ್ತಿನ ಮೂಲ ಮಾಲೀಕರಾಗಿದ್ದು, ಸದರಿ ಸ್ವತ್ತು ಬೈರಯ್ಯ ನವರಿಂದ ಮರಿಲಿಂಗಯ್ಯ ನವರಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕಂದಾಯ ದಾಖಲಾತಿಗಳು ಈ ಹಿಂದೆ ಬೈರಯ್ಯ ಮತ್ತು ಮರಿಲಿಂಗಯ್ಯ ನವರ ಹೆಸರಿನಲ್ಲಿ ಇರುವುದನ್ನು ನೋಡಿರುತ್ತೀರಾ ಎಂದರೆ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಸರ್ಕಾರದಿಂದ ಬೈರಯ್ಯ ನವರ ಕುಟುಂಬಕ್ಕೆ ಮಂಜೂರಾದ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ.

ಮೂಲ ಮಾಲೀಕರು ಯಾರು ದಾವಾ ಸ್ವತ್ತನ್ನು ನನಗೆ ಮಾರಾಟ ಮಾಡಿಲ್ಲ , ಸದರಿ ಮೂಲ ಮಾಲೀಕರು ಬೆಂಗಳೂರಿಗೆ ದುಡಿಯಲು ಹೋದಾಗ ನಾನು ದಾವಾ ಸ್ವತ್ತಿಗೆ ಸಂಬಂದಪಟ್ಟ ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸುಳ್ಳು. ವಾದಿಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ನಾನು ತಿಳಿದುಕೊಂಡಿಲ್ಲ. 1950 ರಿಂದ 2026 ರವರೆಗಿನ ದಾವಾ ಸ್ವತ್ತಿನಲ್ಲಿ ಯಾವ ಯಾವ ವ್ಯವಹಾರಗಳು ಆಗಿರುತ್ತವೆ ಎಂದು ನಾನು ತಿಳಿದುಕೊಂಡಿಲ್ಲ ಎಂದರೆ ನಾನು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ , ಆದರೆ ಸದರಿ ಸ್ವತ್ತಿನ ಬಗ್ಗೆ ಬಾಯಿ ಮಾತಿನಲ್ಲಿ ಏನು ಆಗಿರುತ್ತದೆ ಎಂದು ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತನ್ನು ಖರೀದಿ ಮಾಡಬೇಕಾದರೆ ಇ ಸಿ ನೋಡಿರುತ್ತೀರಾ ಎಂದರೆ ಸಾಕ್ಷಿ ನನ್ನ ಯಜಮಾನರು ದಾವಾ ಸ್ವತ್ತು ಖರೀದಿ ಮಾಡಬೇಕಾದರೆ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತಾರೆ , ಅವರು ಈಗ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ .

ನಿ ಡಿ 71 ರ ಬಗ್ಗೆ ನನಗೆ ಏನು ನೆನಪಿಲ್ಲ. ನಿ ಡಿ 70 ರ ಬಗ್ಗೆ ನನಗೆ ಏನಾದರೂ ಗೊತ್ತಿದೆಯಾ ಎಂದರೆ ನನಗೆ ನೆನಪಿಲ್ಲ. ನಿ ಡಿ 70 ರಲ್ಲಿ ಏನು ವಿಚಾರ ಬರೆದಿದೆ ಎಂದು ನನಗೆ ಗೊತ್ತಿಲ್ಲ ಮತ್ತು ನಾನು ನಿ ಡಿ 70 ನ್ನು ಸೃಷ್ಟಿ

ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ ಡಿ 70 ರಲ್ಲಿ ಇರುವ ವಿಚಾರಗಳು ಏನು ಕಾಣುತ್ತಿಲ್ಲ ಎಂದರೆ ಸಾಕ್ಷಿ ಬೇರೆ ದಾಖಲಾತಿಗಳನ್ನು ತೆಗೆಸಿ ಅದನ್ನು ಪರಿಶೀಲನೆ ಮಾಡೋಣ ಎಂದು ನುಡಿಯುತ್ತಾರೆ .

ನಿಡಿ 63 ರಿಂದ 69 ರವರೆಗಿನ ದಾಖಲಾತಿಗಳಲ್ಲಿ ಏನು ವಿಚಾರಗಳು ಬರೆದಿರುತ್ತವೆ ಎನ್ನುವ ವಿಚಾರ ನನಗೆ ನೆನಪಿಲ್ಲ. ನಿಡಿ 63 ರಿಂದ 69 ರವರೆಗಿನ ದಾಖಲಾತಿಗಳ ಟೈಪಿಂಗ್ ಮಾಡಿಸಿ ಕಾಪಿಯನ್ನು ನ್ಯಾಯಾಲಯ ಕ್ಕೆ ಕೊಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಟೈಪ್ ಮಾಡಿ ಸದರಿ ಪ್ರತಿಯನ್ನು ಕೊಡುತ್ತೇನೆ. ಬೈರಯ್ಯ ಮತ್ತು ಮರಿಲಿಂಗಯ್ಯ ನವರ ಕುಟುಂಬದವರು ಇವತ್ತಿಗೂ ಉದ್ದಂಡಹಳ್ಳಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿ ಕಳೆದ 70ವರ್ಷಗಳಿಂದ ಅವರ ಮುಖ ನಾವು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಸದರಿ ಸ್ವತ್ತನ್ನು 2002-03 ರಲ್ಲಿ ಖರೀದಿ ಮಾಡಿರುತ್ತೇನೆ. ನಿಪಿ 17 ರಂತೆ ಸ.ನಂ. 40/2 ಬಿ ನೇದ್ದರಲ್ಲಿ ನನ್ನ ಹೆಸರಿಗೆ ಖಾತೆ ಇರುವುದಿಲ್ಲ ಎಂದರೆ ಸಾಕ್ಷಿ ನನ್ನ ಸ್ವತ್ತು ಸ.ನಂ. 40/2 ಎ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 39 ಮತ್ತು 40 ರ ಜಾಗ ನನಗೆ ಗೊತ್ತಿಲ್ಲ . ಮೂಲವಾಗಿ ಸ್ವತ್ತು ಯಾರಿಂದ ಹೇಗೆ ಬಂದಿತ್ತು ಎನ್ನುವ ವಿಚಾರ ನನ್ನ ಯಜಮಾನರಿಗೆ ಗೊತ್ತಿರುತ್ತದೆ , ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1985 ರಲ್ಲಿ ಸ್ವತ್ತು ಯಾರ ಹೆಸರಿನಲ್ಲಿತ್ತು ಎಂದು ನನಗೆ ನೆನಪಿಲ್ಲ. 1960 ರಲ್ಲಿ ಈ ಸ್ವತ್ತು ಯಾರ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. 1994 ರಲ್ಲಿ ನಾಗರಾಜು ರವರ ಹೆಸರಿನಲ್ಲಿತ್ತು . ದಾವಾ ಸ್ವತ್ತಿನ ಮತ್ತು ಅದರ ಮಾಲೀಕತ್ವದ ಬಗ್ಗೆ ನನಗೆ ಏನು ಗೊತ್ತಿಲ್ಲದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂದಿಸಿದಂತೆ ನನ್ನ ಯಜಮಾನರು ವ್ಯವಹಾರಗಳನ್ನು ಮಾಡಿರುತ್ತಾರೆ ಎಂದರೆ ಸರಿ. ನನ್ನ ಹೆಸರಿಗೆ ನನ್ನಯಜಮಾನರು ಮತ್ತು ಇನ್ನು ಕೆಲವರು ಸೇರಿ ಸಂಚು ಮಾಡಿ ದಾವಾ ಸ್ವತ್ತಿಗೆ ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸುಳ್ಳು .

ಸ.ನಂ.40 ಕ್ಕೆ ಸಂಬಂದಿಸಿದಂತೆ ದಿನಾಂಕಃ02.09.1932 ರಲ್ಲಿ ಮರಿಲಿಂಗಯ್ಯ ರವರು ನಂಜುಂಡಯ್ಯ ನವರಿಗೆ ಆಧಾರ ಮಾಡಿ ದಾಖಲಾತಿಗಳನ್ನು ಮಾಡಿರುತ್ತಾರೆ, ಆದರೆ ಮಾರಾಟ ಆಗಿರುವುದಿಲ್ಲ ಎಂದರೆ ಸಾಕ್ಷಿ ನಾನು ಆಗ ಹುಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ಸ.ನಂ. 40 ಕ್ಕೆ ಸಂಬಂದಿಸಿದಂತೆ ಬೈರಯ್ಯ ನವರ ಕುಟುಂಬದವರು ಮತ್ತು ಅವರ ಮಗ ಮರಿಲಿಂಗಯ್ಯ ನವರ ಕುಟುಂಬದವರು ಯಾವುದೇ ಮಾರಾಟ ಮಾಡಿರುವುದಿಲ್ಲ ಎಂದರೆ ಸುಳ್ಳು.

ಸ.ನಂ. 40/2 ಕ್ಕೆ ಸಂಬಂದಿಸಿದ ಇ ಸಿ ಗಳನ್ನು ನ್ಯಾಯಾಲಯಕ್ಕೆ ಕೊಡಲು ಆಗುತ್ತದೆಯಾ ಎಂದರೆ ಸಾಕ್ಷಿ ವಿಚಾರ ಮಾಡಿ ಹೇಳುತ್ತೇನೆ ಎಂದು ನುಡಿಯುತ್ತಾರೆ. ನಾನು ಸ.ನಂ.40/2 ಮತ್ತು 40/1 ಕ್ಕೆ ಸಂಬಂದಿಸಿದ ಇ ಸಿ ಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ, ಅದಕ್ಕೆ ಕಾರಣ ಮೂಲ ಮಾಲೀಕರ ಬಗ್ಗೆ ನ್ಯಾಯಾಲಯಕ್ಕೆ ಗೊತ್ತಾಗುತ್ತದೆ ಎಂದು ಸೂಚಿಸಿದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳು ಸೃಷ್ಟಿ ಮಾಡಿಕೊಂಡಿರುವ ದಾಖಲಾತಿಗಳು ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸುಳ್ಳು. ನಾನು ಸುಳ್ಳು ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸುಳ್ಳು. ನಾನು ಮುಂದೆ ಬರುವ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಮರುವಿಚಾರಣೆ: ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**